VIII ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಕಾನೂನು ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕ, 2004

(ವಿಧಾನ ಪರಿಷತ್ತಿನಿಂದ ತಿದ್ದುಪಡಿಯೊಡನೆ ಅಂಗೀಕಾರವಾದ ರೂಪದಲ್ಲಿ)

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಮತ್ತು ವಕ್ಫ್ ಮಂತ್ರಿ): ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ತಿದ್ದುಪಡಿಯೊಡನೆ ಅಂಗೀಕಾರವಾದ ರೂಪದಲ್ಲಿರುವ 'ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ 2004'ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಸಿ.ಆರ್. ಸಗೀರ್ ಅಹಮದ್: ಇದು ಸ್ವಯಂ ಘೋಷಿತ ಆಸ್ತಿಯ ವಿಚಾರವಾಗಿದ್ದು, ಇನ್ನು ಆರು ತಿಂಗಳುಗಳ ಕಾಲ ಮುಂದುವರಿಸಲು ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ. ತಾವು ಇದಕ್ಕೆ ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಇದೇನು ಸ್ವಯಂ ಘೋಷಿತ ಆಸ್ತಿ ತೆರಿಗೆ ಬಗ್ಗೆ ಈಗಾಗಲೇ ಹಿಂದೆ ಮೂಲ ಬಿಲ್ ಬಂದಾಗ ನಾವು ಕೆಲವೊಂದು ವಿಷಯಗಳ ಬಗ್ಗೆ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೆವು ಆದರೆ ಅದನ್ನು ಸರ್ಕಾರ ತರಲಿಲ್ಲ. ಅದಕ್ಕೆ ಈಗ ಇದೇನು ದಂಡರಹಿತವಾದಂಥ ತೆರಿಗೆಯನ್ನು ತುಂಬುವಂಥಾದ್ದು ಅದು ಸ್ವಯ ಘೋಷಿತ ಆಸ್ತಿ ತೆರಿಗೆ ಪ್ರಕಾರ ಇರುವಂಥಾದ್ದು ಈ ಅವಧಿ ವಿಸ್ತರಣೆ ಬಗ್ಗೆ ಈ ಬಿಲ್‌ನ್ನು ತೆಗೆದುಕೊಂಡುಬಂದಿದ್ದೀರಿ. ಈ ಮೂಲ ಬಿಲ್‌ನಲ್ಲಿ ಕೆಲವೊಂದು ಪರಿವರ್ತನೆ, ಬದಲಾವಣೆಗಳನ್ನು ತರಬೇಕೆಂದು ನಮ್ಮದು ಒತ್ತಾಯ ಈಗಲೂ ಇದೆ. ಅದನ್ನು ಮಾಡುತ್ತೇವೆ ಎಂದು ಹೇಳಿದ್ದರು. ಮಾನ್ಯ ಡಿ.ಕೆ. ಶಿವಕುಮಾರ್ ಅವರ ಜತೆಯಲ್ಲಿ ಹಿಂದೆ ಚರ್ಚೆ ಮಾಡಿದಾಗ ಇದರ ಪರಿಣಾಮಗಳನ್ನು ನೋಡಿಕೊಂಡು ನಾವು ಮಾಡುತ್ತೇವೆ ಎಂದು ಹೇಳಿದ್ದರು. ಅದರ ಬಗ್ಗೆ ಬೇರೆ ಬಿಲ್‌ನ್ನು ತರಬೇಕಾಗುತ್ತದೆ. ಆಯ್ತು ಇವತ್ತು ಅವಧಿಯನ್ನು ಏನು ಕೇಳಿದ್ದೀರಿ – "..... ತೆರಿಗೆದಾರರಿಗೆ ಒಂದಿಷ್ಟು ಪರಿಹಾರವನ್ನು ನೀಡುವ ದೃಷ್ಟಿಯಿಂದ ದಂಡವಿಲ್ಲದೆ ತೆರಿಗೆ ಸಂದಾಯ ಮಾಡುವ ಅವಧಿಯನ್ನು 2004ರ ಮಾರ್ಚ್ ಮೂವತ್ತೊಂದವರೆಗೆ ವಿಸ್ತರಿಸಲು ಪ್ರಸ್ತಾವಿಸಿದೆ" ಎಂದು ಇದು ಇರುವಂಥಾದ್ದು ಮತ್ತೆ ಏನಾಗಿದೆ ಎಂದರೆ ಮಾರ್ಚ್ ಮೂವತ್ತೊಂದು ಈಗ ಬರುತ್ತಿದೆ. ಅದಕ್ಕೆ ಇನ್ನು ಒಂದು ತಿಂಗಳು ಮಾತ್ರ ಇದೆ. ಈಗ ಫೆಬ್ರವರಿ ತಿಂಗಳು ನಡೆಯುತ್ತಿದ್ದು ಮುಂದೆ ಮಾರ್ಚ್ ಬರುತ್ತದೆ. ಹಾಗಾಗಿ ನೀವೇನು ಮೂರು ತಿಂಗಳು ಅಂತ ಏನು ತಂದಿದ್ದೀರಿ, ಇದು ಜನರಿಗೆ ಟೈಮ್ ಕೊಟ್ಟಹಾಗೆ ಆಗುತ್ತದೆ. ಇನ್ನೊಂದು ಮೂರು ಅಥವಾ ಆರು ತಿಂಗಳು ವಿಸ್ತರಣೆ ಮಾಡಿದರೆ, ಮುಂದಿನ ಜೂನ್‌ವರೆಗೆ ಆದರೂ ಮಾಡಿದರೆ ಏನಾದರೂ ಪ್ರಯೋಜನವಾಗುತ್ತದೆ, ಅವರಿಗೆ ಈ ಕರ ತುಂಬುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಈ ಬಿಲ್‌ನ್ನು ನೀವು ತೆಗೆದುಕೊಂಡು ಬಂದು ಅವಧಿ ವಿಸ್ತರಣೆ ಮಾಡುವುದಕ್ಕೆ ನೀವು ಕೇಳಿದ್ದು ನಾವು ಒಪ್ಪಿಗೆ ಕೊಡಲಿಕ್ಕೆ ತಯಾರಿದ್ದೇವೆ. ಆದರೆ ಇದರಿಂದ ಕರದಾತರಿಗೆ ಏನೂ ಪ್ರಯೋಜನ ಆಗುವುದಿಲ್ಲ. ಇದನ್ನು ಬೇಕಾದರೆ ವಾಪಸ್ಸು ತೆಗೆದುಕೊಂಡು ಮಂಡನೆ ಮಾಡಬಹುದು. ಆದರೆ

ಈ ಅವಧಿ ಕೂಡ ಮುಕ್ತಾಯದ ಹಂತಕ್ಕೆ ಬಂದಿದೆ. ಬಹುತಃ ಹಿಂದಿನ ಸದನದಲ್ಲಿ ಇದನ್ನು ತೆಗೆದುಕೊಂಡು ಬಂದಿದ್ದರೆ ಇವತ್ತು ಪ್ರಯೋಜನವಾಗುತ್ತಿತ್ತು. ಆದ್ದರಿಂದ ಈ ಬಿಲ್‌ನ್ನು ಪಾಸನ್ನು ತೆಗೆದುಕೊಂಡು ಅಥವಾ ಇವಕ್ಕೆ ತಿದ್ದುಪಡಿಯನ್ನು ತಂದು ಇನ್ನೊಂದು ಮೂರು ತಿಂಗಳು ಅಥವಾ ಆರು ತಿಂಗಳು ಅಂತ ಹಾಕಬೇಕೆಂದು ನಾವು ಹೇಳುವಂಥಾದ್ದು.

ಶ್ರೀ ಪಿ.ಆರ್. ಸಗೀರ್ ಅಹಮದ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ವಿರೋಧ ಪಕ್ಷದ ಎಲ್ಲಾ ನಾಯಕರ ಜತೆ ಈಗಾಗಲೇ ನಗರಾಭಿವೃದ್ಧಿ ಸಚಿವರು ಸಮಾಲೋಚನೆ ನಡೆಸಿರುವಂಥ ವಿಚಾರ ತಮಗೂ ತಿಳಿದಿರುವಂಥಾದ್ದು. ಸ್ವಯಂ ಘೋಷಿತ ಆಸ್ತಿ ತೆರಿಗೆ ಬಗ್ಗೆ ಕೆಲವೊಮ್ಮೆ ಗೊಂದಲ ಆಗಿರುವಂಥ ವಿಚಾರವೂ ತಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಇದು ಸ್ವಲ್ಪ ಸಮಯ ವಿಸ್ತರಣೆ ಮಾಡಬೇಕು ಎನ್ನುವ ಅಭಿಪ್ರಾಯಕ್ಕೆ ತಾವು ಒಳಗೊಂಡು ಸರ್ಕಾರಕ್ಕೆ ಸಲಹೆ ಮಾಡಿದ್ದು ಈಗ ಮಾರ್ಚ್‌ವರೆಗೂ ವಿಸ್ತಾರವಾದಂಥ ಸಮಯವನ್ನು ಕೊಟ್ಟಿದ್ದೇವೆ. ಇದು ಇನ್ನು ಇಂದಿನ ತಿಂಗಳುವರೆಗೆ ಮಾತ್ರ ಇದೆ ಎನ್ನುವುದರ ಬಗ್ಗೆ ತಾವು ನಮಗೆ ಸಲಹೆ ನೀಡಿದಂತೆ ಮುಂದಿನ ಅಧಿವೇಶನದ ವರೆಗೂ ಸಹ ಇದನ್ನು ವಿಸ್ತಾರ ಮಾಡುವಂಥ ಅವಕಾಶ ಸಿಗುತ್ತದೆ. ಮುಂಬೆ ಹೊಸದಾಗಿ ಚುನಾವಣೆ ನಡೆದು ಹೊಸ ಸರ್ಕಾರ ಬಂದ ನಂತರವೂ ಸಹ ಇದನ್ನು ಮುಂಬುವರೆಸುವುದಕ್ಕೆ ಅವಕಾಶ ಇದೆ. ಆದ್ದರಿಂದ ಇವತ್ತು ಈ ಸರ್ಕಾರದಲ್ಲಿ ಮಾರ್ಚ್‌ವರೆಗೆ ಮುಂಬುವರೆಸಿರುವುದರ ಬಗ್ಗೆ ಈ ಒಂದು ಪ್ರಸ್ತಾವನೆಯನ್ನು ತಂದಿದ್ದೇವೆ. ಇದಕ್ಕೆ ದಯವಿಟ್ಟು ಒಪ್ಪಿಗೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಇನ್ನೂ ಮೂರು ತಿಂಗಳು ಇದರಲ್ಲಿ ಅಡಿಶನಲ್ ಆಗಿ ಕೊಟ್ಟುಮಾಡಿಬಿಡಿ. ಈ ವಿಸ್ತರಣೆ ಮುಂದಿನ ಜೂನ್-ಜುಲೈ ತಿಂಗಳವರೆಗೆ ಅಂತ ಹೇಳಿ.

ಶ್ರೀ ಪಿ.ಆರ್. ಸಗೀರ್ ಅಹಮದ್: ನನಗೆ ತಿಳಿದಹಾಗೆ ವಿವರವಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಇಲ್ಲಿ ಈಗ ಮಂತ್ರಿಗಳು ಇಲ್ಲ ಎರಡನೇಯದು ಸರ್ಕಾರದ ನಿರ್ಣಯ.

ಶ್ರೀ ಜಗದೀಶ್ ಶೆಟ್ಟರ್: ಇದರೊಳಗೆ ನಿಮ್ಮ ಬಿಲ್‌ನಲ್ಲಿ ಅಡಿಶನಲ್ ತಿದ್ದುಪಡಿ ಕೊಟ್ಟು ಡೇಟ್ ಮಾತ್ರ ಬದಲಾವಣೆ ಮಾಡುವಂಥಾದ್ದು, ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದುಬಿಟ್ಟರೆ ನಾವು ಬಿಲ್‌ನ್ನು ಪಾಸ್‌ಮಾಡಿಕೊಡುತ್ತೇವೆ.

ಅಧ್ಯಕ್ಷರು: ಪ್ರಶ್ನೆ ಏನೆಂದರೆ ಸಂಬಂಧಪಟ್ಟ ಮಂತ್ರಿಗಳನ್ನು ಅವರು ಕೇಳಬೇಕಾಗುತ್ತದೆ.

ಗೊಂದಲ

ಶ್ರೀ ಪಿ.ಆರ್. ಸಗೀರ್ ಅಹಮದ್: ನಾವು ಮಾರ್ಚ್ ಮೂವತ್ತೊಂದರವರೆಗೆ ಎಂದು ಏಕೆ ತಂದಿದ್ದೇವೆ ಎಂದರೆ 2004-05ನೇ ಸಾಲಿನ ಈ ಕಂದಾಯ ವಸೂಲಾತಿ ಬಗ್ಗೆ ಯಾವುದೇ ತರಹದಲ್ಲಿ ಆಡಚಣೆ ಆಗಕೂಡದು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದೇವೆ. ಈಗ ಮಕ್ತೊಮ್ಮೆ ನಾವೇನಾದರೂ ವಿಸ್ತಾರವಾಗಿ ಮುಂದುವರೆಸಿದ್ದಲ್ಲಿ ನಗರಸಭೆಗಳಿಗೆ, ಪುರಸಭೆಗಳಿಗೆ ಮತ್ತು ಪಟ್ಟಣ ಪಂಚಾಯತಿಗಳಿಗೆ ಬರಬೇಕಾದಂಥ ಆದಾಯಕ್ಕೆ ಎಲ್ಲೋ ಒಂದು ಕಡೆ ಕಡಿವಾಣ ಹಾಕಿದಹಾಗೆ ಆಗುತ್ತದೆ. ಆದ್ದರಿಂದ ನಾನು ನಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾರ್ಚ್ 31ರವರೆಗೆ ಈ ಅವಕಾಶವನ್ನು ಕೊಡುವುದರ ಮೂಲಕ ಮುಂದಿನ ದಿನಗಳಲ್ಲಿ ಈ ರೀತಿಯ ಯಾವುದೇ ನ್ಯೂನತೆಗಳು ಬಂದಾಗ ಇದನ್ನು ಮುಂದುವರೆಸುವುದಕ್ಕೆ ಅವಕಾಶ ಸಿಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರಲ್ಲಿ

ನನ್ನ ವಿನಂತಿ ಏನೆಂದರೆ ಆರ್ಥಿಕವಾಗಿ ನಗರಸಭೆಗಳು ಮತ್ತು ಪುರಸಭೆಗಳ ಆದಾಯದ ಬಗ್ಗೆಯೂ ನಾವು ಚಿಂತನೆ ಮಾಡಬೇಕು. ನಾವು ಇನ್ನೂ ಸಮಯವನ್ನು ಹೆಚ್ಚಾಗಿ ಕೊಟ್ಟಾಗ ಇವತ್ತಲ್ಲದಿದ್ದರೆ ನಾಳೆ ಕಟ್ಟಬಹುದು ಎಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ಬರುತ್ತದೆ. ಆದ್ದರಿಂದ 31ನೇ ಮಾರ್ಚ್‌ವರೆಗೆ ಇದಕ್ಕೆ ತಾವು ಒಪ್ಪಿಗೆ ಕೊಟ್ಟಲ್ಲಿ ಮುಂದಿನ ದಿನಗಳಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಯಾವ ನಿರ್ಣಯವನ್ನು ಬೇಕಾದರೂ ಸದನದಲ್ಲಿ ತಂದು ಒಂದು ಮಸೂದೆಯನ್ನು ಮಾಡುವುದಕ್ಕೆ ಮತ್ತೊಮ್ಮೆ ಇದಕ್ಕೆ ಅವಕಾಶವನ್ನು ಒದಗಿಸಿಕೊಡುವುದಕ್ಕೆ ನಮಗೆಲ್ಲರಿಗೂ ಅವಕಾಶ ಇದೆ. ಆದ್ದರಿಂದ ನಗರಸಭೆ, ಪುರಸಭೆಗಳ ಆದಾಯದ ದೃಷ್ಟಿಯಿಂದ ಇದು ಮಾರ್ಚ್ 31ರವರೆಗೆ ಮುಂದುವರೆಸುವುದು ಸೂಕ್ತ ಎನ್ನುವ ಅಭಿಪ್ರಾಯ ನನ್ನದು.

†**ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು)**: ಇಲ್ಲಿ ನಿಮ್ಮಲ್ಲಿ ನಾನು ವಿಶೇಷವಾಗಿ ವಿನಂತಿ ಮಾಡುವಂಥಾದ್ದು ಏನೆಂದರೆ, ಈಗ ಮಾರ್ಚ್ ತನಕ ಎಂದು ಹೇಳುವುದಕ್ಕೆ ಏನೂ ಅರ್ಥ ಇಲ್ಲ. ಮಾನ್ಯ ಪ್ರತಿಪಕ್ಷದ ನಾಯಕರು ಏನು ಸಲಹೆಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಜೂನ್‌ವರೆಗೆ ಅವಧಿಯನ್ನು ವಿಸ್ತರಿಸಿ ತಿದ್ದುಪಡಿಯನ್ನು ತರುವಂಥ ಅವಶ್ಯಕತೆ ಇದೆ. ತಾವು ಆದಾಯದ ಸಂಪನ್ಮೂಲಗಳನ್ನು ಜೋಡಿಸಲಿಕ್ಕೆ ಕಷ್ಟವಾಗುತ್ತದೆ ಎನ್ನುವ ಮಾತನ್ನು ಹೇಳಿದ್ದೀರಿ. ಕಳೆದ ಎರಡು ವರ್ಷಗಳಿಂದ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಈ ಸಂಗ್ರಹ ಆಗಿಲ್ಲ. ಇದರ ಬಗ್ಗೆ ಅನೇಕ ತರಹದ ಗೊಂದಲಗಳು ಇವೆ. ನಾವು ಮಾನ್ಯ ಸಚಿವರನ್ನು ಪದೇಪದೇ ವೈಯಕ್ತಿಕವಾಗಿ, ಬೇರೆಬೇರೆ ನಿಟ್ಟಿನಲ್ಲಿ ಕೂಡ ಇದಕ್ಕೆ ಸ್ವಲ್ಪ ತಿದ್ದುಪಡಿಯನ್ನು ತರಬೇಕೆಂದು ಹೇಳಿ ಅವರನ್ನು ಕನ್ವಿನ್ಸ್ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಏಕೆಂದರೆ ಈ ತರಹ ಗೊಂದಲ ಸ್ಥಿತಿಗೆ ನಮ್ಮನ್ನು ಸಾಕಬೇಡಿ. ಒಂದು ಕಡೆ ಸಂಗ್ರಹ ಮಾಡಬೇಕು ಅಂತ ನೀವು ಹೇಳುವಂಥಾದ್ದು, ಇನ್ನೊಂದು ಕಡೆಯಲ್ಲಿ ಈ ಬಗ್ಗೆ ರಾಜ್ಯದಾದ್ಯಂತ ಬಂದಂಥ ಪ್ರತಿಭಟನೆ. ವಸ್ತುನಿಷ್ಠವಾಗಿ ಯಾವ ರೀತಿ ಅದನ್ನು ಅರ್ಥಮಾಡಿಕೊಂಡು ತಾವು ತಿದ್ದುಪಡಿಯನ್ನು ತರಬೇಕೆಂದು ಸಲಹೆಗಳನ್ನೂ ಕೂಡ ನಾವು ಕೊಟ್ಟಿದ್ದೇವೆ. ಆದರೆ ಇದರಲ್ಲಿ ವಿಶೇಷವಾಗಿ ಭೌಗೋಳಿಕವಾಗಿ ಇರುವಂತಹ ವ್ಯತ್ಯಾಸಗಳ ಆಧಾರದಲ್ಲಿ ಮಂಗಳೂರಿನಂತಹ ಪ್ರದೇಶದಲ್ಲಿ ಖಾಲಿ ಜಾಗದ ಮೇಲೆ ತೆರಿಗೆ ಹಾಕುವಂತಹ ಅವಶ್ಯಕತೆ ಇಲ್ಲ ಹಾಕಬಾರದು ಎಂದು ನಾವು ಹೇಳುವಂಥಾದ್ದು. ಇಲ್ಲಿ ನಮಗೆ ವಿಶೇಷವಾದ ರಿಯಾಯಿತಿಯನ್ನು ಕೊಡಬೇಕೆಂದು ಹೇಳುವಂಥಾದ್ದು ಮತ್ತು ಆ ಬಗ್ಗೆ ಮನವರಿಕೆಯನ್ನು ಮಾಡುವಂತಹ ಪ್ರಯತ್ನವನ್ನೂ ಕೂಡ ನಾವು ಮಾಡಿದ್ದೇವೆ. ಅದನ್ನು ಕೊಡಬೇಕಾದರೆ ಬೇರೆ ಪ್ರದೇಶಗಳಲ್ಲಿ ಅವರಿಗೆ ಆಸಕ್ತಿ ಇದ್ದರೆ ಅದನ್ನು ಹಾಕಲಿ. ಆದರೆ ಮಂಗಳೂರಿನಂಥ ಪ್ರದೇಶಗಳಲ್ಲಿ ಹಾಕುವಂಥಾದ್ದು ಬೇಡ ಎಂದು ಹೇಳುವಂಥಾದ್ದು ಒಂದು ಅರ್ಥ. ಎರಡನೇಯದು, ಲ್ಯಾಂಡ್ ವ್ಯಾಲ್ಯುಯೇಶನ್ ಮಾಡುವಂಥ ಸಂದರ್ಭದಲ್ಲಿ ಇದಕ್ಕೆ ಇರುವಂತಹ ಕಮಿಟಿ ಏನಿದೆ ಮತ್ತು ಆ ಮಾರ್ಕೆಟ್ ವ್ಯಾಲ್ಯುವನ್ನು ಹಿಡಿದುಕೊಂಡು ಹೋಗುವಂತಹ ಏನೊಂದು ವ್ಯಾಲ್ಯುಯೇಶನ್ ಮಾಡುವಂತಹ ಸಿಸ್ಟಮ್ ಇದೆ. ಅದನ್ನು ಬಿಟ್ಟು ಸ್ಥಳೀಯ ಕಮಿಟಿಗೇ ಅದನ್ನು ಕೊಟ್ಟು ಆ ಡಿಪ್ರೀಸಿಯೇಶನ್ ವಾಲ್ಯು ಆಗಿ ಯಾವ ಆಧಾರದಲ್ಲಿ ಅದನ್ನು ತರಬೇಕು ಎಂದು ಹೇಳುವಂಥಾದ್ದು. ಸ್ಥಳೀಯ ಮಟ್ಟದಲ್ಲಿ ಯಾವ ರೀತಿ ಅದರ ಬೆಲೆಯನ್ನು ನಿರ್ಧರಿಸಬೇಕು ಎಂದು ಹೇಳುವಂಥಾದ್ದಕ್ಕೆ ಸ್ಥಳೀಯ ಕಮಿಟಿಗೆ ಅಧಿಕಾರ ಕೊಟ್ಟಲ್ಲಿ ಹೆಚ್ಚಿನ ರೀತಿಯಲ್ಲಿ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಅನುಕೂಲವಾಗುತ್ತದೆ. ಬಹುಶಃ ಅದಕ್ಕೆ ಸಂಬಂಧಪಟ್ಟಿರುವಂತಹ

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ತಿದ್ದುಪಡಿಯನ್ನೂ ಕೂಡ ಇದರಲ್ಲಿ ಸೇರಿಸಿದ್ದರೆ ಒಳ್ಳೆಯದಾಗುತ್ತಿತ್ತು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ನಂತರ ಬಿಲ್ಡಿಂಗ್‌ನ ಸಂದರ್ಭದಲ್ಲಿ ಸೆಟ್‌ಬ್ಯಾಕ್‌ಗಳನ್ನು ಬಿಡುತ್ತಾರೆ. ಈ ಸೆಟ್‌ಬ್ಯಾಕ್‌ಗಳೂ ಈ ತೆರಿಗೆಗೆ ಅನ್ವಯವಾಗುವುದರಿಂದ, ಸೆಟ್‌ಬ್ಯಾಕ್ ಬಿಟ್ಟಲ್ಲಿ ಈ ತೆರಿಗೆ ಹಾಕುವುದು ಸರಿಯಿಲ್ಲವೆಂದು ಹೇಳುವಂಥಾದ್ದು ಇದೆ. ನಂತರ ಪಬ್ಲಿಕ್ ಯುಟಿಲಿಟಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಚಾಲ್ತಿಗಳಿಗಿರಬಹುದು. ಅಲ್ಲಿಗೆ ವಿಶೇಷವಾದಂಥ ಎಕ್ಸೆಪ್ಷನ್ ತರಬೇಕೆಂದು ಹೇಳುವಂಥಾದ್ದು. ಸ್ವಂತ ಉದ್ಯೋಗಕ್ಕೋಸ್ಕರ ಕಮರ್ಷಿಯಲ್ ಬಿಲ್ಡಿಂಗ್ ಅಥವಾ ಸ್ವಂತ ಮನೆಗಳಿಗೆ ಸಂಬಂಧಪಟ್ಟು, ಅಂತಾದ್ದರಲ್ಲಿ ವಿನಾಯಿತಿಗಳನ್ನು ರಿಯಾಯಿತಿಗಳನ್ನು ಕೊಡಬೇಕು. ಈ ರೀತಿಯಾದ ಅನೇಕ ಸಲಹೆಗಳನ್ನೂ ಕೂಡ ನಾವು ಬೇರೆ ಸಂದರ್ಭದಲ್ಲಿ ಕೊಟ್ಟಿದ್ದೇವೆ. ಇವುಗಳಿಗೆ ಸಂಬಂಧಪಟ್ಟಂಥ ತಿದ್ದುಪಡಿಯನ್ನು ತಂದಲ್ಲಿ, ಶಾಶ್ವತವಾದಂಥ ಪರಿಹಾರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿತ್ತು. ಒಂದು ಕಡೆಯಲ್ಲಿ ನೀವು ಈ ಗೊಂದಲವನ್ನು ನಿವಾರಣೆ ಮಾಡಲಿಕ್ಕೇ ಹೋಗಿಲ್ಲ. ಇನ್ನೊಂದು ಕಡೆಯಲ್ಲಿ ಈ ಮಾರ್ಚ್ ಎಂದು ಹೇಳಿದ ತಕ್ಷಣ ಏಪ್ರಿಲ್, ಮೇ ಏನಕ ಬುಕಾಮಾ ಪ್ರಕ್ರಿಯೆಗಳು ನಡೆಯುವಂಥಾದ್ದು. ಆದ್ದರಿಂದ, ನಾನು ಹೇಳುವಂಥಾದ್ದು ಕನಿಷ್ಠ ಜೂನ್‌ವರೆಗಾದರೂ ಇದನ್ನು ವಿಸ್ತರಣೆ ಮಾಡಬೇಕು. ಮುಂದಿನ ಸರ್ಕಾರಕ್ಕೆ ಸ್ಪಷ್ಟವಾಗಿ ತೀರ್ಮಾನ ಕೊಡುವಂಥ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಇಲ್ಲದೇ ಹೋದರೆ, ಇದಕ್ಕೆ ಸಂಬಂಧಪಟ್ಟಂಥ 2 ಪರ್ಸೆಂಟ್ ಮೆಟ್ರೋಪಾಲಿಟನ್‌ಗಳಿಗಾಗಿರುವಂಥ ಹೆನಾಲ್ಟಿ ಕಟ್ಟುವಂಥಾದ್ದು ಅಥವಾ ಬೇರೆ ತರಹ ಹೆನಾಲ್ಟಿ ಕಟ್ಟುವುದಕ್ಕೆ ಅವಕಾಶವಾಗುವ ರೀತಿಯಲ್ಲಿ ತಾವು ವಿಶೇಷವಾಗಿರುವಂತಹ ಒಂದು ಅವಕಾಶವನ್ನು ಮಾಡಿಕೊಡಬೇಕು. ಈ ಕಾರಣಕ್ಕೋಸ್ಕರ ಮಾರ್ಚ್‌ನವರೆಗೆ ಇರುವಂಥಾದ್ದನ್ನು ಜೂನ್‌ವರೆಗೆ ವಿಸ್ತರಣೆ ಮಾಡುವುದಕ್ಕೆ ತಾವು ಅನುಮತಿ ಕೊಡಬೇಕೆಂಬ ವಿನಂತಿಯನ್ನು ಅಧ್ಯಕ್ಷರ ಮೂಲಕ ಮಾಡಲಿಕ್ಕೆ ಇಚ್ಛಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ಕರ ಸಂಗ್ರಹಣೆಯಲ್ಲಿ ಹೆಚ್ಚು ಕಡಿಮೆಯಾಗುತ್ತದೆ ಅದಕ್ಕಾಗಿ ಮಾರ್ಚ್‌ವರೆಗೆ ಅವಧಿ ಕೊಟ್ಟಿದ್ದೇವೆಯು ಅವರು ಹೇಳಿದರು. ಅದು ಯಾವುದೂ ಸಮಸ್ಯೆ ಇಲ್ಲ. ತುಂಬಾದೇ ಇದ್ದರೆ, ಹಳೆಯ ಪದ್ಧತಿ ಪ್ರಕಾರ ಮುಂದುವರಿಯುತ್ತಾರೆ. ನಿಮ್ಮ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿದರೆ, ಎಲ್ಲವೂ ಬಗೆಹರಿದು ಇರುತ್ತದೆ. ಅವರು ಸರಿಯಾಗಿ ಕೆಲಸ ಮಾಡದಿದ್ದರೆ, ಕರ ಸಂಗ್ರಹವಾಗುವುದಿಲ್ಲ. ಎಲ್ಲಿಯವರೆಗೆ ಅಂದರೆ, ನಮ್ಮ ಹುಬ್ಬಳ್ಳಿ ದಾರವಾಡ ಕಾರ್ಪೊರೇಷನ್‌ನಲ್ಲಿ ಚಲನ್ ಕೊಡಿ, ನಾವು ಹಣ ತುಂಬುತ್ತೇವೆಂದು ನಾಗರೀಕರು ಹೋದರೆ ಕೊಡುವುದಿಲ್ಲ. ಚಲನ್ ಕೊಡುವುದಕ್ಕೂ ಹಣ ಕೊಡಿ ಎಂದು ಕೇಳುತ್ತಾರೆ. ಆ ರೀತಿಯ ಪರಿಸ್ಥಿತಿ ಇದೆ. ನಿಜವಾಗಿಯೂ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿದರೆ ಎಲ್ಲಾ ರೀತಿಯ ಅನುಕೂಲ ಆಗುತ್ತದೆ. ಅದಕ್ಕಾಗಿ ಜೂನ್‌ವರೆಗೂ ವಿಸ್ತರಣೆ ಮಾಡಿ.

ಶ್ರೀ ಬಿ.ಆರ್. ಪಾಟೀಲ್ (ಜಮಖಂಡಿ): ಆರ್ಥಿಕ ವರ್ಷ ಒಂದು ಹೇಳಿದರೆ, ಅದು ಸರ್ಕಾರ ಆಗಬಹುದು, ನಗರಸಭೆ ಇರಬಹುದು ಅಥವಾ ಪುರ ಸಭೆ ಇರಬಹುದು, ಮಾರ್ಚಿಯಿಂದ ಮಾರ್ಚಿನವರೆಗೆ ಲೆಕ್ಕ ಸಾಕಷ್ಟಕ್ಕಂಥಾದ್ದು. ಸ್ವಯಂಘೋಷಿತ ತೆರಿಗೆ ವಿಚಾರವಾಗಿ ಮಾರ್ಚ್‌ನಿಂದ ಪ್ರಾರಂಭವಾಗಿ ಮಾರ್ಚ್‌ಗೆ ಕೊನೆಗೊಳ್ಳುತ್ತದೆ. ಇದು ತಮಗೂ ಗೊತ್ತಿದೆ. ವಿರೋಧ ಪಕ್ಷದ ನಾಯಕರಿಗೂ ಗೊತ್ತಿದೆ. ಈಗ ಸ್ವಯಂಘೋಷಿತ ಆಸ್ತಿ ತೆರಿಗೆಯು ಒಂದು ಮಾಹಿತಿಯಾಧಾರಿತ

ವಿಚಾರ. ಬೆಂಗಳೂರು ಮಹಾ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಡೆಯುತ್ತಿರವಂಥಾದ್ದು. ಮಾನ್ಯ ಯೋಗೀಶ್‌ಭಟ್ಟರವರು ಹೇಳಿದ ಹಾಗೆ ಕೆಲವು ಜಿಲ್ಲೆಗಳ ಮಟ್ಟದಲ್ಲಿ ಭಿನ್ನವಾಗಿದೆ, ಆ ವಿಚಾರವನ್ನು ನಾನು ಒಪ್ಪುತ್ತೇನೆ. ಭೂಮಿ ಬೆಲೆ ಜಾಸ್ತಿಯಾಗಿರುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ನೀವು ಬೆಂಗಳೂರು ಮಾದರಿ ಎಂದು ಹೇಳಿದಿರಲ್ಲಾ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬೆಂಗಳೂರು ಮಾದರಿಯನ್ನೇ ಎಲ್ಲಾ ಕಡೆಗೂ ತೆಗೆದುಕೊಂಡು ಬನ್ನಿ ಎಂದು ನಾವೂ ಮೊದಲಿನಿಂದಲೂ ಹೇಳುತ್ತಿದ್ದೇವೆ. ಮಾನ್ಯ ಡಿ.ಕೆ. ಶಿವಕುಮಾರ್ ಜೊತೆಯಲ್ಲಿ ಚರ್ಚೆ ನಡೆದಾಗ ಅದನ್ನೇ ಹೇಳಿದೆವು. ಬೆಂಗಳೂರಿನಲ್ಲಿ ಏನು ಪದ್ಧತಿ ಇದೆ, ಇದನ್ನೇ ಇಡೀ ರಾಜ್ಯಕ್ಕೆ ಅನ್ವಯ ಮಾಡಿಬಿಡಿ ಎಂದು ಹೇಳಿದೆವು. ಆದರೆ, ಈಗ ಅವರು ಮಾಡಿರುವುದರಲ್ಲಿ ಅಲ್ಲಿಗೂ, ಇಲ್ಲಿಗೂ ಬಹಳಷ್ಟು ವ್ಯತ್ಯಾಸಗಳಿವೆ. ಅದಕ್ಕಾಗಿ ಎಲ್ಲಾ ಕಡೆ ವಿರೋಧ ಬರುತ್ತಾ ಇದೆ. ಬೇರೆ ಕಡೆ ಇರುವುದನ್ನು ಬೆಂಗಳೂರಿಗೆ ಹೋಲಿಕೆ ಮಾಡಲಿಕ್ಕೆ ಹೋಗಬೇಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ನಾನು ಹೇಳುವುದೇನೆಂದರೆ, ಮಾನ್ಯ ಯೋಗೀಶ್‌ಭಟ್ ರವರು ಹೇಳಿದಹಾಗೆ ಕೆಲವು ಭಿನ್ನವಾದಂಥ ವಿಚಾರಗಳು ಇವೆ. ಕೆಲವು ತಿದ್ದುಪಡಿಗಳನ್ನು ತರುವಂಥ ಅವಶ್ಯಕತೆ ಕಂಡುಬಂದಿದೆ. ಬಂದಿಲ್ಲ ಎಂದು ನಾನು ಹೇಳುವುದಿಲ್ಲ. ಅವರು ನೀಡಿರುವಂಥ ಸಲಹೆ ಅಗತ್ಯವಾಗಿ ಸ್ವಯಂ ಘೋಷಿತ ತೆರಿಗೆಯ ವಿಚಾರವಾಗಿ ಕೆಲವು ತಿದ್ದುಪಡಿಗಳ ಅವಶ್ಯಕತೆಯೂ ಇದೆ. ಆ ತಿದ್ದುಪಡಿಗಳನ್ನು ತರುವಂಥಾದ್ದಕ್ಕೆ ಸಾಧ್ಯತೆಗಳೂ ಇದೆ. ಆದರೆ, ಈ ಆರ್ಥಿಕ ವರ್ಷ ಮಾರ್ಚ್‌ನಿಂದ ಮಾರ್ಚ್‌ವರೆಗೆ ತೆರಿಗೆಯನ್ನು ಸಂಗ್ರಹಿಸಬೇಕಾಗಿರುವುದರಿಂದ ಮತ್ತು ಇದರಲ್ಲಿ ಅನೇಕ ವಿಚಾರಗಳಲ್ಲಿ ಗೊಂದಲವಾಗಿರುವುದರಿಂದ ಮಾರ್ಚ್‌ವರೆಗೆ ಇದನ್ನು ವಿಸ್ತರಣೆ ಮಾಡುವುದರ ಬಗ್ಗೆ ನಿರ್ಣಯ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಇದರಲ್ಲಿ ಕಷ್ಟವಾಗುತ್ತದೆ ಎನ್ನುವುದರ ಬಗ್ಗೆ ಮನದಟ್ಟಾದಾಗ, ಇನ್ನೂ ಹೆಚ್ಚಾಗಿ ಸಮಯ ಕೊಡುವಂಥಾದ್ದರ ಬಗ್ಗೆ ಇದೇ ಸದನಕ್ಕೆ ತರಬೇಕಾಗುತ್ತದೆ. ಇದೇ ಸದನದ ಒಪ್ಪಿಗೆ ಪಡೆಯಬೇಕಾಗುತ್ತದೆ. ಅದರ ನಂತರವೇ ತೀರ್ಮಾನ ಮಾಡಬೇಕಾಗುತ್ತದೆ. ಆ ಉದ್ದೇಶದಿಂದಾಗಿ, ದಯವಿಟ್ಟು ಮಾರ್ಚ್‌ವರೆಗೆ ಮುಂದುವರಿಸುವುದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಮಾನ್ಯ ಸಚಿವರಿಂದ ನನಗೊಂದು ಕ್ಲಾರಿಫಿಕೇಷನ್ ಬೇಕು. ಹಿಂದೆ ನಿಮ್ಮ ಸಚಿವರು ಒಂದು ಸ್ಟೇಟ್‌ಮೆಂಟ್ ಮಾಡಿದ್ದರು. ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಒಂದು ಸಮಿತಿಯನ್ನು ರಚಿಸಿ ಅವರ ಮುಂದೆ ಅಪೀಲು ಕೊಡುತ್ತೇವೆಂದು ಹೇಳಿದ್ದರು. ಆಪೀಲ್ ಪ್ರಾವಿಷನ್ನೂ ಕೊಟ್ಟರು. ಅದು ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ. ಇದ್ದರೆ ಇದು ತೀರ್ಮಾನವಾಗುತ್ತಿತ್ತು. ಅದು ಇಲ್ಲದೇ ಇದ್ದರೆ ಹೇಗೆ? ನಿಮ್ಮ ಸಚಿವರೇ ಸ್ಟೇಟ್‌ಮೆಂಟ್ ಮಾಡಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ಸಚಿವರು ಈ ಸದನದಲ್ಲಿ ಆ ಮಾಹಿತಿ ಕೊಟ್ಟಿದ್ದಲ್ಲಿ ಆ ಸಮಿತಿಯು ಅಸ್ತಿತ್ವಕ್ಕೆ ಬರಬೇಕಾದಂಥಾದ್ದು, ಬರಲೇಬೇಕು. ಆದರೆ, ಆ ಮಾಹಿತಿ ತಕ್ಷಣಕ್ಕೆ ನನ್ನ ಹತ್ತಿರ ಇಲ್ಲ.

ಶ್ರೀ ಶಿವಾನಂದ ಎಸ್ ಪಾಟೀಲ್: ಅಸ್ತಿತ್ವದಲ್ಲಿ ಒಂದು ಆಪೀಲು ಕಂಡಕ್ಟ್ ಮಾಡಿದೆಯೋ ಇಲ್ಲವೋ. ನಮಗೆ ಇಷ್ಟೇ ಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್: ಆ ಕಾರಣಕ್ಕೆ ನನ್ನ ಪ್ರಶ್ನೆ ಇಲ್ಲ.

ಶ್ರೀ ಶಿವಾನಂದ ಪಾಟೀಲ್: ಹಾಗಾದರೆ, ಈ ಬಿಲ್ ಪಾಸ್ ಮಾಡಿ ಉಪಯೋಗವೇನು?

ಶ್ರೀ ಸಿ.ಆರ್. ಸಗೀರ್ ಅಹಮದ್: ಇಲ್ಲಿ ಬಂದಿರುವಂಥ ವಿಚಾರವೇನೆಂದರೆ, ಈ ಮಾರ್ಚ್‌ದಲ್ಲಿ ಮುಗಿಯಲಿ. ನಗರಸಭೆಗಳಿಗೆ ಮಾರ್ಚ್ 31ರ ತನಕ ಹಣವನ್ನು ಖಾತರಿ ಮಾಡುವುದರ ಬಗ್ಗೆ ಸಮಯವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವನೆ ತಂದು ಮುಂದೆ ಇದೆ. ಇದನ್ನು ಒಂದು ವಿಷಯವನ್ನಾಗಿ ಮಂಡಿಸಿದ್ದೇವೆ. ಅದಕ್ಕೆ ಒಪ್ಪಿಗೆ ಕೊಡಿ ಎಂದು ಹೇಳಿದ್ದೇವೆಯೇ ವಿನಃ ಇನ್ನು ಮುಂದೆ ಯಾವ ಯಾವ ಸಮಿತಿಗಳನ್ನು ಮಾಡಬೇಕು ಮತ್ತು ಮಾನ್ಯ ಯೋಗೀಶ್ ಭಟ್‌ರವರು ಹೇಳಿದ ಕೆಲವು ಸಲಹೆಗಳನ್ನು ಸರ್ಕಾರದವರು ಒಪ್ಪಲೇಬೇಕಾಗುತ್ತದೆ. ಬೇರೆ ಬೇರೆ ಜಿಲ್ಲೆಗಳಿಗೆ ಹೋದಾಗ ವಿಚಾರಗಳು ಭಿನ್ನವಾಗಿವೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಅವರು ವಿತ್‌ಡ್ರಾಗಿ ಹೇಳಿದರೆಂಬುದನ್ನು ಕೇಳಿಕೊಂಡು ಬಂದು ಉತ್ತರ ಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಅವರು ಒಂದು ರಿಲೆಕ್ಸೆಂಟ್ ಪಾಯಿಂಟ್ ಎತ್ತಿದರು. ನೀವು ಮಾರ್ಚ್ 31ರ ವರೆಗೆ ಅವಧಿ ಕೊಡುತ್ತೀರಿ. ಅದು ಸರಿ. ಆದರೆ, ಆ ಜಿಲ್ಲಾ ಸಮಿತಿ ರಚನೆ ಆಗದೇ ಇದ್ದರೆ, ನಾಳೆ ಅಲ್ಲಿ ಮ್ಯಾಜ್ಯೂನೇ ಫಿಕ್ಸ್ ಆಗುವುದಿಲ್ಲ ಆ ಕಮಿಟಿ ಅಸ್ತಿತ್ವಕ್ಕೆ ಬರದೇ ಇದ್ದರೆ, ನೀವು ಅವಧಿ ಕೊಟ್ಟಿದ್ದೂ ಪ್ರಯೋಜನ ಇಲ್ಲ. ಅದರ ಸಲುವಾಗಿ ಅವರು ಕೇಳುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ಇಲ್ಲಿ ಎರಡು ವಿಚಾರಗಳು ಇವೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಇದು ಕಳೆದ ಮೂರು ವರ್ಷಗಳಿಂದ ನಡೆದಿದೆ. ಇದನ್ನು ಇತ್ಯರ್ಥ ಮಾಡುತ್ತೇವೆ, ಏನಾಡುತ್ತೇವೆ ಎಂದು ಬೇಳುತ್ತಲೇ ಬರುತ್ತಿದ್ದಾರೆ. ಅದಕ್ಕೆ 3-4 ತಿಂಗಳ ಹಿಂದೆ ಮಾನ್ಯ ಸಚಿವರು ಒಂದು ಸ್ಟೇಟ್‌ಮೆಂಟ್ ಮಾಡಿದ್ದರು. ಇವರ ಮೇಲುಸ್ತುವಾರಿ ಸಲುವಾಗಿ ಜಿಲ್ಲಾಧಿಕಾರಿಯ ನೇತೃತ್ವದಲ್ಲಿ ಒಂದು ಸಮಿತಿಯನ್ನು ಜಿಲ್ಲಾ ಮಟ್ಟದಲ್ಲಿ ನಾವು ಸ್ಥಾಪನೆ ಮಾಡುತ್ತೇವೆ, ಅಲ್ಲಿ ನೀವು ಆಕ್ಷೇಪಣೆಯನ್ನು ಸಾಕಿಕೊಂಡು, ಡಿಸ್‌ಪ್ಯೂಟನ್ನು ತೀರ್ಮಾನ ಮಾಡಿ ಎಂದು ಹೇಳಿದ್ದರು. ಆ ಸಮಿತಿಯನ್ನು ನೀವು ರಿಜಿಸ್ಟ್ರೀರ್ ಮಾಡಿದ್ದೀರೋ ಇಲ್ಲವೋ. ಆ ಮಾಹಿತಿ ನಿಮ್ಮಲ್ಲಿ ಇದೆಯೋ ಇಲ್ಲವೋ. ಅದು ಇದ್ದರೆ, ಈ ವಿಸ್ತರಣೆ ಕೊಡುವ ಅವಶ್ಯಕತೆಯೇ ಬರುವುದಿಲ್ಲ. ಅಲ್ಲಿಯೇ ಡಿಸ್‌ಪ್ಯೂಟ್ ತೀರ್ಮಾನವಾಗುತ್ತಿತ್ತು.

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಶಿವಾನಂದ ಪಾಟೀಲರು ಹೇಳಿದ ಹಾಗೆ ಯಾವುದೇ ತೆರಿಗೆಯನ್ನು ಖಾವತಿಸಿರುವಂಥ ಸಂದರ್ಭದಲ್ಲಿ, ಯಾವುದೇ ಒಂದು ಪಾದ ಇದ್ದಂಥ ಸಂದರ್ಭದಲ್ಲಿ ಜಿಲ್ಲಾಮಟ್ಟದ ಒಂದು ಸಮಿತಿ ರಚನೆ ಮಾಡಬೇಕಾದಂಥಾದ್ದು ಅವಶ್ಯಕ. ಇದು ಬೇಡ ಎಂಬುದನ್ನು ನಾನೂ ಒಪ್ಪುವುದಿಲ್ಲ. ಇದನ್ನು ಮಾಡಲೇ ಬೇಕಾದಂಥಾದ್ದು. ಈ ಮಾಹಿತಿಯನ್ನು ನಿಮಗೆ ಹೇಳುವುದಕ್ಕೆ, ಇಲ್ಲಿ ಅಧಿಕಾರಿಗಳು ಇಲ್ಲ. ಇದು ನಿಮ್ಮ ತಿಳುವಳಿಕೆಗಾಗಿ ಮತ್ತು ನನ್ನ ತಿಳುವಳಿಕೆಗಾಗಿಯೂ ಬೇಕು.

ಶ್ರೀ ಶಿವಾನಂದ ಎಸ್ ಪಾಟೀಲ್: ನಿಮ್ಮ ತಿಳುವಳಿಕೆಗಾಗಿ ಅಲ್ಲ ಸ್ವಾಮಿ. ನನ್ನ ತಿಳುವಳಿಕೆಗೂ ಬೇಕು, ಸಾರ್ವಜನಿಕ ತಿಳುವಳಿಕೆಗೂ ಬೇಕು. ನೀವು ಅವರನ್ನು ಕೇಳಿಕೊಂಡು ಬಂದು ಆಮೇಲೆ ನಮಗೆ ಹೇಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ಯಾವುದೇ ಕಂದಾಯ ಪಾವತಿ ಮಾಡುವುದರ ಬಗ್ಗೆ ವಿವಾದ ಇದ್ದಂಥ ಸಂದರ್ಭದಲ್ಲಿ ಸಮಿತಿಯ ಅಸ್ತಿತ್ವ ಇರಲೇಬೇಕು. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚನೆ ಮಾಡುತ್ತೇನೆಂಬ ಅಭಿಪ್ರಾಯವನ್ನು ನಗರಾಭಿವೃದ್ಧಿ ಸಚಿವರು ವ್ಯಕ್ತಪಡಿಸಿದ್ದಲ್ಲಿ, ಆ ಸಮಿತಿಯು ಅಸ್ತಿತ್ವದಲ್ಲಿ ಇದೆಯೆಂಬ ಭಾವನೆ ನನ್ನದು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಚಿವರು ಬಹಳ ವಿಚಿತ್ರವಾದಂಥ ಹೇಳಿಕೆಯನ್ನು ಕೊಡುತ್ತಿದ್ದಾರೆ. ನಾವು ಸ್ಪೆಸಿಫಿಕ್ ಆಗಿ ಹೇಳುತ್ತಾ ಇದ್ದೇವೆ, ಆ ಕಮಿಟಿ ಅಸ್ತಿತ್ವಕ್ಕೇ ಬಂದಿಲ್ಲ.

ಶ್ರೀ ಶಿವಾನಂದ ಎಸ್ ಪಾಟೀಲ್: ಇವರು ಹೇಳುತ್ತಾ, ಹೇಳುತ್ತಾ ಐದು ವರ್ಷವಾಯಿತು. ಎರಡು ಸಾವಿರದ ಇಸವಿಯಲ್ಲಿ ಈ ಸ್ವಯಂ ಘೋಷಿತ ತೆರಿಗೆ ವ್ಯವಸ್ಥೆ ತಂದು, ಸಿಕ್ಕಿಹಾಕಿಕೊಂಡು ಒದ್ದಾಡುತ್ತಾ ಇದ್ದೇವೆ. ಕೊನೆಯಲ್ಲಿ ಹೋಗುವಾಗಲಾದರೂ ಸರಿಯಾಗಿ ಉತ್ತರ ಕೊಟ್ಟು ಹೋಗಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಸುಮ್ಮನೆ ಮನೆ ಕಟ್ಟುವುದು ಬಿಟ್ಟು, ಈ ಸ್ವಯಂ ಘೋಷಿತ ತೆರಿಗೆ ವಿಚಾರಕ್ಕೆ ಬಂದು ಈ ಕಷ್ಟಕ್ಕೆ ಸಿಕ್ಕಿಹಾಕಿಕೊಂಡರು. ಈಗ ಅವರಿಗೆ ಅಧಿಕಾರಿಗಳೂ ಇಲ್ಲ. ಮಾಹಿತಿ ತೆಗೆದುಕೊಳ್ಳುವುದಕ್ಕೆ ಅವರಿಗೆ ಆಗುತ್ತಾ ಇಲ್ಲ. ನಮ್ಮೆಲ್ಲರ ಅಪೇಕ್ಷೆ ಎಂದರೆ, ಇದರಲ್ಲಿ ಮಾರ್ಚ್ ಎನ್ನುವುದಕ್ಕೆ ಬದಲಾಗಿ ಜೂನ್ ಎಂದು ಹಾಕಿದರೆ ಎಲ್ಲರಿಗೂ ಅನುಕೂಲವಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್: ನೀವೆಲ್ಲಾ ಒಟ್ಟಾಗಿ ನಗರಾಭಿವೃದ್ಧಿ ಸಚಿವರ ಜೊತೆಯಲ್ಲಿ ಸಮಾಲೋಚನೆ ನಡೆಸಿದ್ದೀರಿ. ಒಂದು ಕಡೆ ನಿಮ್ಮ ವಾದ ಏನಿತ್ತು ಎಂದರೆ, ಯಾವ ಮನೆ ಮಾಲೀಕರು ಕಂದಾಯವನ್ನು ಪಾವತಿ ಮಾಡುವಂಥ ಸಂದರ್ಭದಲ್ಲಿ, ಬಡ್ಡಿ ವಿನಾಯಿತಿ ಕೊಡುತ್ತೀರಾ ಎನ್ನುವ ಮಟ್ಟಕ್ಕೂ ಚರ್ಚೆ ನಡೆದಿರುವುದು ತಮಗೂ ತಿಳಿದಿದೆ. ಆ ವಿನಾಯಿತಿಗಳು ಮೊರೆಯಬೇಕೆಂಬುದೇ ಸರ್ಕಾರದ ಉದ್ದೇಶವಾಗಿರುವುದರಿಂದ, ಇದನ್ನು ಮಾರ್ಚ್‌ವರೆಗೆ ಮುಂದುವರಿಸುತ್ತಾ, ಮುಂದೆ ಇನ್ನೂ ಮೂರು ತಿಂಗಳು ಮುಂದುವರಿಸುವ ಬಗ್ಗೆ ಅನುಮಾನ ಏಕೆ? ಸಾರ್ವಜನಿಕರಿಗೆ ಅನುಕೂಲವಾಗಬೇಕು, ಮನೆ ಮಾಲೀಕರಿಗೆ ಅನುಕೂಲವಾಗಬೇಕು ಎಂಬ ಧ್ಯೇಯದಿಂದ ಮಾರ್ಚ್‌ವರೆಗೆ ಮಾಡುವುದು ಸೂಕ್ತವೆನ್ನುವುದು ನನ್ನ ಅಭಿಪ್ರಾಯ. ಆದ್ದರಿಂದ, ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಎಲ್ಲಾ ಸದಸ್ಯರಲ್ಲಿ ನನ್ನ ವಿನಂತಿ. ಬಯಮಾಡಿ, ಮಾರ್ಚ್‌ವರೆಗೆ ಮುಂದುವರಿಸುವುದಕ್ಕೆ ಒಪ್ಪಿಗೆ ಕೊಡಿ.

ಶ್ರೀ ಶಿವಾನಂದ ಎಸ್ ಪಾಟೀಲ್: ಮುಂದೆ ನೀವೇ ಇರುವುದಿಲ್ಲ, ಏಕೆ ಚಿಂತೆ ಮಾಡುತ್ತೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ನಾವು ಇರುತ್ತೇವೋ, ನೀವು ಇರುತ್ತೀರೋ ನೋಡೋಣ. ನಾವು ಇರುತ್ತೇವೆಂಬ ಬಗ್ಗೆ ದೇವರ ದಯೆ ಇದೆ, ಜನರ ಆಶೀರ್ವಾದ ಇದೆ. ಆದುದರಿಂದ ನಾವೇ ಬರುತ್ತೇವೆಂದು ಹೇಳಿದ್ದೇವೆ. ನೀವು ಅಲ್ಲೇ ಇರಬೇಕು, ನಾವು ಇಲ್ಲೇ ಇರಬೇಕೆಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇವೆ.

1.30 ಪಿಎಂ

ಶ್ರೀ ಎನ್. ಯೋಗೇಶ್ ಭಟ್: ಮಾನ್ಯ ಅಧ್ಯಕ್ಷರೇ, ಜನರು ಟ್ಯಾಕ್ಸ್ ಕೊಡುವುದಕ್ಕೆ ತಯಾರಾಗಿದ್ದಾರೆ. ಈ ಒಂದು ಗೊಂದಲದಿಂದ ಬಹುಶಃ ಪಕ್ಷದ ನಾಯಕರನ್ನು ಕೇಳಿದರೆ ಗೊತ್ತಾದೀತು. ಅವರು ಈ ವಿಷಯದಲ್ಲಿ ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ಮಾನ್ಯ ಸಚಿವರು ಬಂದಿದ್ದಾರೆ. ಅವರ ಹತ್ತಿರ ಸ್ಪಷ್ಟವಾಗಿ ಕೇಳಿ ಬಿಡೋಣ. ಈಗ ಸೆಲ್ಫ್ ಅಸೆಸ್‌ಮೆಂಟ್ ಬಗ್ಗೆ ಪ್ರಶ್ನೆ ಬಂದಿರುವುದು. ಸೆಲ್ಫ್ ಅಸೆಸ್‌ಮೆಂಟ್ ಕಲೆಕ್ಷನ್ ಮಾರ್ಚ್ ತಿಂಗಳು ಕೊನೆ ಎಂದು ಹೇಳುವ ವಿಚಾರದಲ್ಲಿದ್ದೇವೆ. 2002, 2003 ಮತ್ತು 2004ನೇ ಸಾಲಿನದ್ದು ಸೆಪ್ಟಂಬರ್ ಎಂದು ಇದ್ದುದ್ದನ್ನು ಮಾರ್ಚ್ ಎಂದು ಏನು ಅವಧಿ ನಿಗದಿ ಮಾಡಿದ್ದೀರಿ, ಅದನ್ನು ಜೂನ್ ತನಕ ಮುಂದುವರಿಸಿ ಎಂದು ನಾವೆಲ್ಲರೂ ಕೇಳುತ್ತಿದ್ದೇವೆ. ಅದಕ್ಕೆ ಈ ರೀತಿಯಾದ ತಿದ್ದುಪಡಿಯನ್ನು ತರಬೇಕೆಂಬುದು ನಮ್ಮೆಲ್ಲರ ಅಪೇಕ್ಷೆಯಾಗಿದೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಅದು ಎಕ್ಸಿಸ್ಟೆನ್ಸ್‌ನಲ್ಲಿ ಬಂದಿದೆಯೇ ಇಲ್ಲವೇ?

ಶ್ರೀ ಡಿ.ಕೆ. ಶಿವಕುಮಾರ್: ಈಗ ತಾವೇನು ಕೇಳುತ್ತಿದ್ದೀರಿ, ಆ ಪ್ರಕಾರ ಸೆಪ್ಟೆಂಬರ್‌ವರೆಗೆ ಕಟ್ಟಲು ಅವಕಾಶವಿತ್ತು. ಅದನ್ನು ಮಾಡುವುದಕ್ಕೆ ಆಗಲಿಲ್ಲ. ಅದಕ್ಕೆ ಫೈನ್ ಕಟ್ಟ ಬೇಕಾಗಿತ್ತು. ಅದು ಆಗಲಿಲ್ಲ. ಈಗ ಫೈನ್ ಮಾಫಿ ಮಾಡಲು ಒಂದು ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ದಂತ ರಹಿತವಾದಂಥ ಅವಧಿಯು ಸೆಪ್ಟೆಂಬರ್ ವರೆಗೆ ಇತ್ತು. ಅದು ಆಗಲಿಲ್ಲ. ಹಾಗೆಯೇ ಇದರಲ್ಲಿ ಬಹಳಷ್ಟು ಗೊಂದಲವಿದೆ ಎಂದು ಹೇಳಿ, ಈಗಾಗಲೇ ಸಾಕಷ್ಟು ಚರ್ಚೆಯಾಗುತ್ತಾ ಇದೆ. ಹಿಂದೆ ಸದನದಲ್ಲಿ ನೀವು ಬಿಲ್ ಪಾಸ್ ಮಾಡಿಕೊಳ್ಳುವಂಥ ಸಂದರ್ಭದಲ್ಲಿ ಕೆಲವೊಂದು ಸಲಹೆ ಸೂಚನೆಗಳನ್ನು ನಾವು ಕೊಟ್ಟಿದ್ದೆವು. ಆಗ ನೀವು ಮುಂದೆ ನೋಡೋಣ. ಈಗ ಬಿಲ್ ಪಾಸ್ ಆಗಲಿ ಎಂದು ಹೇಳಿದ್ದೀರಿ. ನಮ್ಮ ಬೆಂಗಳೂರಿಗೂ ಬೇರೆ ನಗರಗಳಿಗೂ ವ್ಯತ್ಯಾಸ ಇದೆ. ಇಲ್ಲಿನ ವ್ಯವಸ್ಥೆಯ ಬೇರೆ ಇದೆ. ರಾಜ್ಯದ ಬೇರೆ ಬೇರೆ ನಗರಪ್ರದೇಶಗಳಲ್ಲಿರುವಂಥ ವ್ಯವಸ್ಥೆಯು ಬೇರೆ ಇದೆ. ಇದರ ಬಗ್ಗೆ ಸಾಕಷ್ಟು ಚರ್ಚೆ ಆಗುತ್ತಿದೆ. ಹೋರಾಟ ಸ್ಟೈಕ್ ನಡೆಯುತ್ತಿವೆ. ನಾವು ಕೆಲವೊಂದು ಸಲಹೆ ಸೂಚನೆಗಳನ್ನು ಕೊಡುತ್ತೇವೆ. ಆದುದರಿಂದ ಒಂದು ಬೇರೆ ಬಿಲ್‌ನ್ನು ತೆಗೆದುಕೊಂಡು ಬನ್ನಿ. ನೀವು ಮಾರ್ಚ್ 31ರ ವರೆಗೆ ಎಂದು ಹೇಳುತ್ತಾ ಇದ್ದೀರಿ. ಮಾರ್ಚ್ 31 ಇನ್ನೇನು ಬಂದು ಬಿಟ್ಟಿದೆ. ನಾವು ಈಗಾಗಲೇ ಫೆಬ್ರವರಿ ತಿಂಗಳಲ್ಲಿದ್ದೇವೆ. ಈಗ ನೀವೇನಾದರೂ ಅವಕಾಶ ಕೊಟ್ಟರೂ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಅದಕ್ಕಾಗಿ ಇದನ್ನು ಜೂನ್ ಅಥವಾ ಜುಲೈ ತಿಂಗಳ ವರೆಗೆ ವಿಸ್ತರಣೆ ಮಾಡಿ. ಅದರಿಂದ ಜನರಿಗೆ ಅನುಕೂಲವಾಗುತ್ತದೆ. ತಾವು ಈಗಾಗಲೇ ಹೇಳಿಕೆ ಕೊಟ್ಟ ಪ್ರಕಾರ, ಕೆಲವೊಂದು ಜಿಲ್ಲಾ ಸಮಿತಿಗಳನ್ನು ಮಾಡುವಂತಾದ್ದು, ವ್ಯಾಲ್ಯುವೇಶನ್ ಮಾಡುವಂತಾದ್ದು, ಯಾರಾದರೂ ಅಪೀಲ್ ಮಾಡುವಂತಾದ್ದು ಮುಂತಾಗಿ ಇವೆ. ಆದರೆ ಆ ಸಮಿತಿಗಳು ಇನ್ನೂ ಅಸ್ತಿತ್ವದಲ್ಲಿ ಬಂದಿಲ್ಲ. ಹೀಗೆ ಸಮಿತಿಗಳು ಇಲ್ಲದಿದ್ದಾಗ ನೀವು ಮಾರ್ಚ್ 31ಕ್ಕೆ ಅವಧಿಯನ್ನು ಕೊಟ್ಟರೂ ಪ್ರಯೋಜನವಾಗುವುದಿಲ್ಲ. ಆ ಸಮಿತಿಯೇ ಇಲ್ಲವಲ್ಲಾ? ಜನರು ಅಪೀಲ್ ಮುಂತಾಗಿ ಯಾರಲ್ಲಿ ಮಾಡ ಬೇಕು? ಆದುದರಿಂದ ಇನ್ನೂ ಮೂರು ತಿಂಗಳು ವಿಸ್ತರಣೆ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್: ತನ್ನು ಎಲ್ಲಾ ಪ್ರಶ್ನೆಗಳಿಗೂ ಇಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ತಾವು ಅದನ್ನು ಪೂರ್ಣವಾಗಿ ಓದಿದ್ದೀರೋ ಇಲ್ಲವೋ ಗೊತ್ತಿಲ್ಲ. ಸೆಪ್ಟೆಂಬರ್ ವರೆಗೆ ಏನಿತ್ತು ಅದನ್ನು ಫೈನ್ ಸಮೇತ ಕಟ್ಟಲು ಮಾರ್ಚ್ ವರೆಗೆ ಅವಧಿ ಕೊಟ್ಟಿದ್ದೇವೆ. ಅದರ ಬಗ್ಗೆ ಈಗಾಗಲೇ ನೋಟಿಫಿಕೇಷನ್ ಆಗಿದೆ. We have got it here. ಇನ್ನು ಸಮಿತಿಗಳ ವಿಚಾರವಾಗಿ ತಾವೇನು

ಹೇಳಿದ್ದೀರಿ. ಸೆಕ್ಷನ್ 48ಕ್ಕೆ ಸಂಬಂಧಪಟ್ಟ ಹಾಗಿ ಕಮಿಟಿಗಳನ್ನು ನಾವು ಸಬ್‌ರಿಜಿಸ್ಟಾರ್ ಮಟ್ಟದಲ್ಲಿ ಮಾಡಿದ್ದೇವೆ. ಅದಕ್ಕೆ ಕಂಪಲ್ಸರಿ ಆ ಒಂದು ಓನರ್ಸ್ ಅಸೋಸಿಯೇಶನ್, ಸಿಎಂಸಿ ಅಧ್ಯಕ್ಷರು, ಹಾಗೂ ನಮ್ಮ ಶಾಸಕರುಗಳನ್ನೂ ಕೂಡ ಸಮಿತಿಯಲ್ಲಿ ಹಾಕಿಕೊಳ್ಳಬೇಕೆಂದು We have already given direction from the Urban Development department to the Revenue Department. ಹಾಗಾಗಿ ನೀವೂ ಕೂಡ ಅಲ್ಲಿದ್ದರೆ, ವಾಸ್ತವಾಂಶಗಳ ಮೇಲೆ ವ್ಯಾಲ್ಯುವನ್ನು ಫಿಕ್ಸ್ ಮಾಡಲಿಕ್ಕೆ ಆಗುತ್ತದೆ ಎಂದು ಕಳುಹಿಸಿಕೊಟ್ಟಿದ್ದೇವೆ. You will be the members. ಇನ್ನೊಂದು ತೀರ್ಮಾನ ಅಂದರೆ 2004–05ರ ಅವಧಿಗೆ ನಮಗೆ ಸಾಕಷ್ಟು ಸಮಯವಿದೆ. ಅದು ನಮ್ಮ ಬೆಂಗಳೂರು ನಗರದ ಬಗ್ಗೆ ಮತ್ತು ಅಲ್ಲಿ ಒಂದು ರೀತಿ, ಇಲ್ಲಿ ಒಂದು ರೀತಿ ಏನಿತ್ತಲ್ಲಾ ಈ ಏಪ್ರಿಲ್ ನಿಂದ ಅದು ಮುಗಿಯುತ್ತದೆ. ಏಪ್ರಿಲ್ ತಿಂಗಳಿಂದ ಬೆಂಗಳೂರು ಸೇರಿದಂತೆ ಎಲ್ಲಾ ಕಡೆಗಳಿಗೂ ಒಂದೇ ನೀತಿನಿಯಮಗಳು ಜಾರಿಗೆ ಬರುತ್ತವೆ. ಈಗ ಐದು ವರ್ಷ ಸಮಯ ತೆಗೆದುಕೊಂಡಿರುವುದರಿಂದ ಹೀಗೆ ವ್ಯತ್ಯಾಸವಿತ್ತು. ತಮಗೆಲ್ಲರಿಗೂ ಏನಾದರೂ ಈ ಬಿಲ್ ವಿಚಾರದಲ್ಲಿ ಕನ್‌ಫ್ಯೂಶನ್ ಇದ್ದಿರಬಹುದು. ತಾವುಗಳೂ ಕೂಡ ವಿವರಗಳನ್ನು ಓದಿರುತ್ತೀರಿ. ಇದರಲ್ಲಿ ತಾತ್ಕಾಲಿಕ ಉಪಬಂಧ ಎಂದು ಇದೆ. 1977ರಲ್ಲಿ ಬರೆದಂತೆ ಒಂದು ವಾಸದ ಕಟ್ಟಡ ಎಂದೇನು ಇದೆ, ಅದಕ್ಕೆ ನಾನು ಅಡಿಶನ್ ಆಗಿ ಸೇರಿಸಿದ್ದೇನೆ. "ಒಂದು ವಾಸದ ಕಟ್ಟಡ ಸಂಬಂಧದಲ್ಲಿ 2004–05ನೇಯ ವಾರ್ಷಿಕವಾಗಿ ನಿರ್ಧರಿಸಿದ ಸಂಬಂಧವಾದ ಭೂಮಿ ಅಥವಾ ಕಟ್ಟಡ ತೆರಿಗೆ ವಿಧಾಯಕ ಬಂಡವಾಳ ಮೌಲ್ಯವು ಹಿಂದಿನ ವರ್ಷದಿಂದ ನಿರ್ಧರಿಸಲಾದ ಸಂದರ್ಭಾನುಸಾರ ಭೂಮಿ ಅಥವಾ ಕಟ್ಟಡದ ತೆರಿಗೆ ಆಧಾರಿತ ಮೌಲ್ಯಕ್ಕಿಂತ ಕಡಿಮೆ ಇದ್ದರೆ, ಸಂದರ್ಭಾನುಸಾರ ಭೂಮಿ ಮತ್ತು ಕಟ್ಟಡದ ಅಂಥ ಕಡಿಮೆಯಾದ ತೆರಿಗೆ ಬಂಡವಾಳ ಮೌಲ್ಯವನ್ನು 2002–03 ಮತ್ತು 2004 ವರ್ಷದಿಂದ ವಾಸದ ಕಟ್ಟಡ ಸಂಬಂಧವಾಗಿ ಕಟ್ಟಡ ಅಥವ ಭೂಮಿಗೆ ತೆರಿಗೆದಾಯಕ ಬಂಡವಾಳ ಮೌಲ್ಯ ಎಂದು ಭಾವಿಸ ತಕ್ಕದ್ದು. ಮತ್ತು 2003–04ರಲ್ಲಿ ಹೆಚ್ಚಿನ ಸ್ವತ್ತು ತೆರಿಗೆಯನ್ನು ಯಾರಾದರೂ ಸಂದಾಯ ಮಾಡಿದ್ದರೆ ಅದನ್ನು ಮುಂಬರುವ ವರ್ಷಗಳಲ್ಲಿ ಹೊಂದಾಣಿಕೆ ಮಾಡತಕ್ಕದ್ದು. ತಾವುಗಳು ಜನರೇನು ಸ್ಟೈಕ್ ಇತ್ಯಾದಿಗಳನ್ನು ಮಾಡುತ್ತಾ ಇದ್ದಾರೆಂದು ಹೇಳುತ್ತಿದ್ದೀರಿ. ಅಂಥ ಪ್ರತಿಭಟನೆ ಇತ್ಯಾದಿಗಳೆಲ್ಲವನ್ನೂ ನಿಲ್ಲಿಸ ಬೇಕೆಂದು ನಿಮ್ಮ ಸಮಿತಿ ಏನು ತೀರ್ಮಾನ ಮಾಡುತ್ತದೆ, ನಿಮಗೆ ಹಿಂದಿನ ಆ ತೀರ್ಮಾನ ಸರಿಯಿಲ್ಲವೆಂದು ಕಾಣುತ್ತದೆ. ಹಾಗಾಗಿ ಅದನ್ನು ಸರಿಮಾಡಲು ನಿಮಗೆ ಅವಕಾಶವನ್ನು ಕೊಟ್ಟಿದ್ದೇವೆ. ಹೀಗೆ ನಾವೇನಾದರೂ ಜಾಸ್ತಿ ಕಲೆಕ್ಟ್ ಮಾಡಿದ್ದರೆ, Suppose the municipality has colleted more tax, it will be adjusted as per the decision taken by your committee. If it is less, they have to pay. ಅದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅಲ್ಲಿ ಯಾವ ಕನ್‌ಫ್ಯೂಶನ್ ಇರಬಾರದು. ಒಂದು ಅಡ್‌ಜಸ್ಟ್ ಮಾಡುವಂಥ ಅವಕಾಶವನ್ನು ಕೊಟ್ಟಿದ್ದೇವೆ. ಆದುದರಿಂದ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನಲ್ಲಿ ಏನು ಕನ್‌ಫ್ಯೂಶನ್ ಇತ್ತು ಅದೆಲ್ಲವನ್ನೂ ಕೂಡ ತೆಗೆದು ಹಾಕಿದ್ದೇನೆ. ರೆಸಿಡೆನ್‌ಶೀಯಲ್ ವಿಚಾರವಾಗಿ ಯಾರು ಸ್ವಂತ ವಾಸ ಮಾಡಬೇಕು ಎಂದು ಮಾಡುತ್ತಾರೆ ಅವರಿಗೆ ಇನ್ನೂ ಕೂಡ ಕನ್‌ಸೆಶನ್ ಕೊಡಲು ಮೇಲ್ಮನೆಯಲ್ಲಿ ಈಗಾಗಲೇ ನಾನು ಭರವಸೆಯನ್ನು ಕೊಟ್ಟಿದ್ದೇನೆ. ಈ ವಿಚಾರಗಳನ್ನು ರಾಜ್ಯದ ಜನತೆಗೆ ತಮ್ಮ ಮೂಲಕ ತಿಳಿಸ ಬಯಸುತ್ತೇನೆ. ಸಮಿತಿಯು ಆಗಿದೆ. Legislators who have not been included we

have asked the revenue department to send information to all of them oto include the legislators.

ಶ್ರೀ ಶಿವಾನಂದ ಎಸ್ ಪಾಟೀಲ್: ಮಾನ್ಯ ಅಧ್ಯಕ್ಷರೇ, ಕಮಿಟಿಯನ್ನು ನೇಮಕ ಮಾಡಿದ ಕುರಿತು ಆರ್ಡರ್ ಆಗಿದ್ದು ಯಾವ ನಗರಸಭೆಯಲ್ಲಿಯೂ ಇಲ್ಲ. ಎರಡು ವರ್ಷಗಳಿಂದ ಟ್ಯಾಕ್ಸ್ ಎನ್‌ಹ್ಯಾನ್ಸ್ ಆಗಿ ನಿಂತು ಬಿಟ್ಟಿತ್ತು.

ಶ್ರೀ ಡಿ.ಕೆ. ಶಿವಕುಮಾರ್: ಇದನ್ನು ಬೆಲೆ ಫಿಕ್ಸ್ ಮಾಡುವವರು ರೆವಿನ್ಯೂ ಡಿಪಾರ್ಟಮೆಂಟ್‌ನವರು, ಸಬ್‌ರಿಜಿಸ್ಟ್ರಾರವರು.

ಶ್ರೀ ಶಿವಾನಂದ ಎಸ್ ಪಾಟೀಲ್: ಕಲೆಕ್ಟ್ ಮಾಡತಕ್ಕಂಥವರು ಯಾರು? ಬೆಲೆ ನಿಗದಿಯನ್ನು ಸಬ್‌ರಿಜಿಸ್ಟ್ರಾರ್ ಮಾಡಿದರೂ ಕಲೆಕ್ಟ್ ಮಾಡುವುದು ಯಾರು?

ಶ್ರೀ ಡಿ.ಕೆ. ಶಿವಕುಮಾರ್: ಅದು ಕಮಿಟಿಯವರ ಕರ್ತವ್ಯ ಆಗುತ್ತದೆ. He is the part of the committee there.

ಶ್ರೀ ಶಿವಾನಂದ ಎಸ್ ಪಾಟೀಲ್: ಅದು ನಮಗೆ ಬೇಕಾಗಿಲ್ಲ. ನಮಗೆ ಬೇಕಾಗಿರುವುದು ಎರಡು ವರ್ಷಗಳ ಹಿಂದೆ ಏನು ಟ್ಯಾಕ್ಸ್ ಇತ್ತು ಅದು ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಬಂದ ಮೇಲೆ ಹೆಚ್ಚಾಯಿತು. ಎರಡು ವರ್ಷಗಳಿಂದ ಅದೇ ರೇಟ್‌ನಲ್ಲಿ ಪ್ರಿವೈಲ್ ಆಗುತ್ತಿದೆ. ಜನರು ಹಣ ತುಂಬುತ್ತಿಲ್ಲ, ನಗರಸಭೆಯವರು ಹಣವನ್ನು ಕಲೆಕ್ಟ್ ಮಾಡುತ್ತಾ ಇಲ್ಲ. ಇದಕ್ಕೆ ಪರಿಹಾರವಾಗಿ ಒಂದು ಕಮಿಟಿಯನ್ನು ನೇಮಕ ಮಾಡಿ ನಾನು ಆರ್ಡರ್ ಮಾಡುತ್ತೇನೆ ಆ ಕಮಿಟಿಯ ಮುಂದಿ ನೀವು ಡಿಸ್ಪ್ಯೂಟ್ಸ್ ಫೈಲ್ ಮಾಡಿ ಎಂದಿದ್ದೀರಿ. ಆದರೆ ಕಮಿಟಿಯೇ ಅಸ್ತಿತ್ವಕ್ಕೆ ಬಂದಿಲ್ಲ. ಈಗ ಮತ್ತೆ ಶಾಸಕರನ್ನು ಸೇರಿಸುತ್ತೇವೆಂದು ಹೇಳುತ್ತಿದ್ದೀರಿ. ಹಾಗಾಗಿ ಟ್ಯಾಕ್ಸ್ ಹೇಗೆ ಡಿಸೈಡ್ ಆಗುತ್ತದೆ?

ಶ್ರೀ ಡಿ.ಕೆ. ಶಿವಕುಮಾರ್: ಕಮಿಟಿ ಕಾನ್ಸ್ಟಿಟ್ಯೂಟ್ ಆಗಿದೆ. ಮುಂದೆ ನಿಮ್ಮನ್ನು ಇನ್‌ವೈಟ್ ಮಾಡುತ್ತಾರೆ. ಈಗ ಅವರು ಕುಳಿತುಕೊಂಡು ಗೈಡ್‌ಲೈನ್ಸ್‌ನ್ನು ನಿಗದಿಪಡಿಸುತ್ತಿದ್ದಾರೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಮಿಟಿಯನ್ನು ಮಾಡುತ್ತೇವೆಂದು ನಿಮ್ಮ ಪ್ರೆಸ್‌ಸ್ಟೇಟ್‌ಮೆಂಟ್ ಇತ್ತು.

ಶ್ರೀ ಡಿ.ಕೆ. ಶಿವಕುಮಾರ್: ಜಿಲ್ಲಾಧಿಕಾರಿಗಳನ್ನು ತೆಗೆದು ಸಬ್‌ರಿಜಿಸ್ಟ್ರಾರ್, ತಹಶೀಲ್ದಾರ್, ಮುನ್ಸಿಪಲ್ ಕಮಿಶನರ್, ಮಟ್ಟದಲ್ಲಿ ಮಾಡುತ್ತೇವೆ.

ಶ್ರೀ ಶಿವಾನಂದ ಎಸ್ ಪಾಟೀಲ್: ಸಬ್ ರಿಜಿಸ್ಟ್ರಾರ್ ಎಂಬ ಸ್ಟೇಟ್‌ಮೆಂಟ್ ಬಂದಿಲ್ಲ. ಈಗ ಏನು ಹೇಳುತ್ತಿದ್ದೀರಿ ಆ ವಿವರಗಳ ಆರ್ಡರ್‌ಗಳೂ ಕೂಡ ಇನ್ನೂ ಬಂದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ಅದರ ಪ್ರತಿಗಳನ್ನು ತಮಗೆ ಸಾಯಂಕಾಲದೊಳಗೆ ತಲುಪಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು): ಕಳೆದ ಎರಡು ವರ್ಷಗಳಿಂದ ಈ ಕುರಿತು ಏನು ಗೊಂದಲವಿದೆ, ಇದಕ್ಕೆ ಸಂಬಂಧಪಟ್ಟಂಥ ತಿದ್ದುಪಡಿಯನ್ನೂ ಕೂಡ ಈ ಸಂದರ್ಭದಲ್ಲಿ ತಂದು ಶಾಶ್ವತವಾದಂಥ ಒಂದು ಕನ್‌ಕ್ಲೂಶನ್‌ಗೆ ಬರಬಹುದಾಗಿತ್ತು. ಈ ಕುರಿತು ನಾನು ವೈಯಕ್ತಿಕ ನೆಲೆಯಲ್ಲಿ ತಮ್ಮನ್ನು ಅನೇಕ ಸಲ ಭೇಟಿಯಾಗಿ, ಒಂದು ಪರಿಹಾರವನ್ನು ಕಾಣಿಸಬೇಕೆಂದು ಕೇಳಿದ್ದೇನೆ. ವಿಶೇಷವಾಗಿ ನಮ್ಮ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ನಾವು ಪಡುತ್ತಿರತಕ್ಕಂಥ ಕಷ್ಟ ಹಾಗೂ ಅನೇಕ ಸಂದರ್ಭಗಳಲ್ಲಿ ನಾವು ತೆರಿಗೆ ಸಂಗ್ರಹಣೆಯನ್ನು ಮಾಡಲು ಆಗುತ್ತಿಲ್ಲ. ಒಂದು ರೀತಿಯಲ್ಲಿನ

ಗೊಂದಲ ಸ್ಥಿತಿಯಲ್ಲಿದ್ದೇವೆ. ಅದಕ್ಕೆ ಸೂಕ್ತವಾದ ತಿದ್ದುಪಡಿಯಾಗಬೇಕು. ವಿಶೇಷವಾಗಿ ಖಾಲಿ ಜಾಗದ ಮೇಲೆ ಹಾಕಿರುವ ತೆರಿಗೆಯನ್ನು ತೆಗೆಯಬೇಕೆಂಬ ಪ್ರಬಲವಾದ ಬೇಡಿಕೆಯಿತ್ತು. ಪ್ರಾಪರ್ಟಿ ಟ್ಯಾಕ್ಸ್ ಎನ್ನುವುದು ಕಟ್ಟಡ ಇತ್ಯಧಿಗಳಿಗೆ ಮಾತ್ರ. ಖಾಲಿ ಜಾಗಗಳಿಗೆ ತೆರಿಗೆ ಬಿಡಬೇಕಾಗುತ್ತದೆ. ಮಹಾನಗರ ಪಾಲಿಕೆಗೆ ಸಂಬಂಧಪಟ್ಟಂಥ ಕಮಿಟಿಯೊಂದಿದೆ. ಅದಕ್ಕೆ ಇಂಥ ನಿರ್ಣಯಗಳನ್ನು ಮಾಡಲು ಅವಕಾಶವನ್ನು ಕೊಡುವಂತಾದ್ದು ಆಗಬೇಕು. ಅದನ್ನು ಬಿಟ್ಟು ಹಿಂದೆ ಡಿ.ಸಿ. ಇದ್ದರು, ಈಗ ಸಬ್‌ರಿಜಿಸ್ಟ್ರಾರ್ ಎಂದು ಹೇಳುತ್ತಾ ಇದ್ದೀರಿ. ಅದರ ಮೇಲೆ ಮಾಡಬೇಕು. ಯಾಕೆಂದರೆ ರೋಡ್ ಬದಿಯಲ್ಲಿರುವುದಕ್ಕೆ ಬೇರೆ valuation ಇರಬಹುದು, ಒಳಗಡೆ ಇರುವುದಕ್ಕೆ ಬೇರೆ valuation ಇರುತ್ತದೆ. ಅದರ ಮೇಲೆ ವಸ್ತುನಿಷ್ಠವಾಗಿ ಬೆಲೆ ನಿರ್ಧರಿಸುವಂತಹ ಹಕ್ಕನ್ನು ಮಹಾನಗರಪಾಲಿಕೆಗೆ ಕೊಡಬೇಕು ಎಂಬ ನಮ್ಮ ಬೇಡಿಕೆ ಇತ್ತು. ಬಹುಶಃ ಇದಕ್ಕೆಲ್ಲದಕ್ಕೆ ಸ್ಪಂದಿಸಿ ತಾವೇನಾದರೂ ತಿದ್ದುಪಡಿ ತಂದಿದ್ದಲ್ಲಿ ಅನುಕೂಲವಾಗುತ್ತಿತ್ತು ಎಂದು ಬೇರೆ ಬೇರೆ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಈಗಲೂ ಹೇಳುತ್ತಿದ್ದೇನೆ. ಮೊನ್ನೆ ಬಜೆಟ್ ಭಾಷಣದಲ್ಲೂ ನಾನು ತಮ್ಮ ಬಗ್ಗೆ ಬಹಳ ನೋವಿನಿಂದ ಪ್ರತಿಕ್ರಿಯೆ ಕೊಡಬೇಕಾಗಿ ಬಂದಿದೆ. ಈ ಬಗ್ಗೆ ಕೂಡ ಇನ್ನೊಂದು ನಾನು ತಮ್ಮ ಗಮನಕ್ಕೆ ತರುವಂತಹದು ಈಗ ಮಾರ್ಚಿ ಅಂತ ಇರುವುದನ್ನು ಕನಿಷ್ಠ ಜೂನ್ ಅಂತ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಅಲ್ಲಿಯತನಕ ತೆರಿಗೆ ಸಂಗ್ರಹಣೆ ಮಾಡುವ ನಿಟ್ಟಿನಲ್ಲಿ ಎರಡು ವರ್ಷದಿಂದ ಪೆಂಡಿಂಗ್ ಇರುವ ದೃಷ್ಟಿಯಿಂದ ಕನಿಷ್ಠ ಇದು ಪೂರ್ತಿ ನಿರ್ಣಯವಾಗುವ ತನಕ ಹಳೆಯ ಪದ್ಧತಿಯಡಿಯಲ್ಲಾದರೂ ಸಂಗ್ರಹ ಮಾಡಲು ಏನಾದರೂ ಒಂದು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ.

ಶ್ರೀ ಡಿ.ಕೆ. ಶಿವಕುಮಾರ್: ಈಗ ನಾನೇನು ತಿದ್ದುಪಡಿ ತಂದಿದ್ದೇನೆ I think ನೀವು ಹೇಳಿದ್ದಕ್ಕೆಲ್ಲಾ ಅಲ್ಲಿ ಉತ್ತರವಿದೆ. ನಿಮ್ಮ ಸಲಹೆಗಳೇನಿವೆ ಅದರ ಬಗ್ಗೆ ಇಲ್ಲಿ ಅಡಗಿದೆ. ಮುಂದಕ್ಕೆ ನೀವು ಕೂತುಕೊಂಡಾಗ ನೀವೇ ಅದನ್ನೆಲ್ಲಾ ಸೆಟ್‌ರೈಟ್ ಮಾಡಲು ಅವಕಾಶ ಇದೆ. ಆದ್ದರಿಂದ ಇದಾದಮೇಲೆ ತಮ್ಮ ಇತರ ಸಲಹೆಗಳೇನಿವೆ ಅವುಗಳ ಬಗ್ಗೆ ಸೂಕ್ತ ಸಂದರ್ಭದಲ್ಲಿ ಸ್ವೀಕಾರ ಮಾಡೋಣ.

ಶ್ರೀ ಶಿವಾನಂದ ಎಸ್ ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, we will be no more legislators after the dissolution. ಆದ್ದರಿಂದ ಮಾರ್ಚಿಗಿರುವುದನ್ನು ಜೂನ್‌ಗೆ ವಿಸ್ತರಿಸಿಬಿಡಿ.

ಶ್ರೀ ಡಿ.ಕೆ. ಶಿವಕುಮಾರ್: ಯಾಕೆ ಹಾಗೆ ಹೇಳುತ್ತೀರಿ? ಚಿಂತೆ ಮಾಡಬೇಡಿ, ನೀವಲ್ಲಿತ್ತೀರಾ, ನಾವಿಲ್ಲಿತ್ತೇವೆ we will do it, do not worry.

ಶ್ರೀ ಶಿವಾನಂದ ಎಸ್ ಪಾಟೀಲ್: ಮಾರ್ಚಿನಿಂದ ಜೂನ್‌ವರೆಗೆ ಎಕ್ಸ್‌ಟೆಂಡ್ ಮಾಡಿ, ಅಷ್ಟರಲ್ಲಿ ಡಿಸ್‌ಪ್ಯೂಟ್ ಕಮಿಟಿಯೂ ಫಾರಂ ಆಗುತ್ತದೆ. ಅಲ್ಲಿಂದ ಯಾರೇ ಬಂದರೂ ಒಬ್ಬರು ಪ್ರತಿನಿಧಿ ಇರುತ್ತಾರೆ. ಅದರಿಂದ dispute settle ಮಾಡಿ ಒಂದು final settlement ಗೆ ಬರಲು ಅನುಕೂಲ ಆಗುತ್ತದೆ. ಮಾರ್ಚಿ ದಾಲಿರುವುದನ್ನು ಜೂನ್‌ವರೆಗೆ ಮಾಡಿಬಿಡಿ. ಮಾರ್ಚಿ ನಂತರ ಯಾವುದೇ ಸರ್ಕಾರ ಇರದೇ ಇದ್ದರೆ ಅದು ಆಚೆಗಡೆ ಆಗಿಬಿಡುತ್ತದೆ, ಈಗ ಯಾರ ಹತ್ತಿರ ಡಿಸ್‌ಪ್ಯೂಟ್ ಮಾಡುವುದು?

ಶ್ರೀ ಡಿ.ಕೆ. ಶಿವಕುಮಾರ್: ಆಗಲೇ ಇದು ಒಂದು ಆರ್ಡರಾಗಿದೆ, ಆರ್ಡರನ್ನು ಆಕ್ಟ್ ರೂಪದಲ್ಲಿ ನಾವು ತರುತ್ತಿದ್ದೇವೆ ಅಷ್ಟೇ. We will consider at the appropriate time.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ವರೆಗೆ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:– "ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ವರೆಗೆ, ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ " ಮೊದಲನೆಯದ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಕೆ. ಶಿವಕುಮಾರ್: ಅಧ್ಯಕ್ಷರೇ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ಈಗ ವಿಶ್ವನಾಥರವರೇ, ನಿಮ್ಮ ಸೌಹಾರ್ದ ಬಿಲ್‌ನ್ನು ಮಂಡಿಸಿ.

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೇ, ಇಲ್ಲಿ ಚರ್ಚೆ ನಡೆದಿರುವುದು ಇದು ಬೇಡ ನಾವು ಪರಸ್ಪರ ಕೂತು ವಿಧಾನಪರಿಷತ್ತಿನಲ್ಲಾದಂತೆ ಚರ್ಚೆ ಮಾಡಿದರೆ ಒಳ್ಳೆಯದು. ನಾನು ಮೂಲಭೂತವಾಗಿ ಯಾಕೆ ಹೇಳುತ್ತೇನೆ ಅಂದರೆ ಸಹಕಾರ ತತ್ವ. ಅನ್ನುವುದು ಕೇವಲ ಈ ರೀತಿ